# ನಗರಸಭಾ ಕಾರ್ಯಾಲಯ, ತುಮಕೂರು.

ಫ್ಯಾಕ್ಸ್ : 2275106, ದೂರವಾಣಿ ಸಂಖ್ಯೆ.
ಪೌರಾಯುಕ್ತರ ಕೊಠಡಿ: 2278480,
ಸಾರ್ವಜನಿಕ ದೂರು ವಿಭಾಗ: 2272200, 2271200
ವೆಬ್‌ಸೈಟ್:www.tumkurcity.gov.in

ನಂ.ನಸತು:ತಾಂಶಾ/ಟೆಂಡರ್/ಸಿಆರ್/161/2008-09 ದಿನಾಂಕ 07-01-2009.

## ತಿದ್ದುಪಡಿ ಅಲ್ಪಾವದಿ ಟೆಂಡರ್ ಪ್ರಕಟಣೆ

ಈ ಕಛೇರಿಯ ಅಲ್ಪಾವಧಿ ಟೆಂಡರ್ ಸಮಸಂಖ್ಯೆ ದಿನಾಂಕ 02-01-2009ರ ಮೂಲಕ ಕರೆಯಲಾಗಿರುವ ಟೆಂಡರ್‌ನಲ್ಲಿ ಕಾಮಗಾರಿಗಳ ಕ್ರಮ ಸಂಖ್ಯೆ 1 ರಿಂದ 23ರ ಕಾಮಗಾರಿಗಳಿಗೆ ದಿನಾಂಕ 05-01-2009 ರಂದು ರಾಜ್ಯ ಪತ್ರಿಕೆಯಾದ ಪ್ರಜಾವಾಣಿ, ಸ್ಥಳೀಯ ದಿನಪತ್ರಿಕೆಯಾದ ಪ್ರಜಾಗಪ್ರತಿಯಲ್ಲಿ ಪ್ರಕಟವಾಗಿರುವಂತೆ **ಇಎಂಡಿ ಹಣವನ್ನು ಅಂದಾಜು ವೆಚ್ಚದ ಶೇಕಡ 1 ರಷ್ಟು ನಿಗಧಿಪಡಿಸಿದ್ದು** ಇದನ್ನು ಕಾಮಗಾರಿಗಳ **ಕ್ರಮ ಸಂಖ್ಯೆ 1 ರಿಂದ 23 ರವರೆಗೆ ಇಎಂಡಿ ಹಣ ಅಂದಾಜು ವೆಚ್ಚದ ಶೇಕಡ 2 ರಷ್ಟು ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.** ಹಾಗೂ ಈ ಹಿಂದೆ ಪ್ರಕಟಣೆಗೊಂಡಿದ್ದ ಪ್ರಕಟಣೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆಧ್ಯಾದೇಶ 2000 ರಂತೆ ಹಾಗೂ ಲೋಕೋಪಯೋಗಿ ಇಲಾಖೆ ಸಂಹಿತೆ ಭಾಗ-11 ಪಿಡಬ್ಲ್ಯೂಜಿ-65 ಮತ್ತು 66 ನಿಬಂಧನೆಗೊಳಪಟ್ಟು ಅರ್ಹ ದರ್ಜೆಯ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಗುತ್ತಿಗೆದಾರರುಗಳಿಂದ ಕೆಲಸ ನಿರ್ವಹಿಸಲು ಪ್ರಕಟಿಸಲಾಗಿತ್ತು. ಇದರ ಬದಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆಧ್ಯಾದೇಶ 2000 ರಂತೆ ಸ್ಟಾಂಡರ್ಡ್ ಟೆಂಡರ್ಸ್ ಡಾಕ್ಯುಮೆಂಟ್‌ನ ಸೂಚನೆ ಮತ್ತು ನಿಬಂಧನೆಗೊಳಪಟ್ಟಂತೆ ಅರ್ಹ ದರ್ಜೆಯ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಗುತ್ತಿಗೆದಾರರುಗಳೆಂದು ಓದಿಕೊಳ್ಳತಕ್ಕದ್ದು. ಹಾಗೂ ಹಾಲಿ ಇರುವ ಷರತ್ತುಗಳು ಜೊತೆಗೆ ಈ ಕೆಳಕಂಡ ಷರತ್ತುಗಳನ್ನು ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು. ಇನ್ಯಾವುದೇ ಷರತ್ತುಗಳಲ್ಲಿ ಬದಲಾವಣೆ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ನಗರಸಭೆಯ ತಾಂತ್ರಿಕ ಶಾಖೆಯಲ್ಲಿ ಪಡೆದುಕೊಳ್ಳತಕ್ಕದ್ದು.

1. ಮೇಲಿನ ಕಾಮಗಾರಿಗಳಿಗೆ ಅರ್ಜಿ ಸಲ್ಲಿಸುವ ಗುತ್ತಿಗೆದಾರರು, ಅದೇ ರೀತಿಯ ಕಾಮಗಾರಿಯನ್ನು (ಎ) ಕಾಮಗಾರಿಗೆ ನಿಗಧಿಪಡಿಸಿದ ಮೊತ್ತದಲ್ಲಿ ಶೇಕಡ 50ರಷ್ಟು ಮೊತ್ತಕ್ಕೆ ಹಿಂದಿನ ಐದು ಆರ್ಥಿಕ ವರ್ಷಗಳಲ್ಲಿನ ಯಾವುದಾದರು ಒಂದು ಆರ್ಥಿಕ ವರ್ಷದಲ್ಲಿ ಕೆಲಸ ಕೈಗೊಂಡು ತೃಪ್ತಿಕರವಾಗಿ ಪೂರೈಸಿರಬೇಕು ಇದಕ್ಕೆ ಸಂಬಂಧಿಸಿದಂತೆ ಸಕ್ಷಮ ಅಧಿಕಾರಿಗಳ ದೃಢೀಕರಣ ಪತ್ರವನ್ನು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿಯೇ ಒದಗಿಸಬೇಕು. ಮತ್ತು ಗುತ್ತಿಗೆದಾರರ ಆರ್ಥಿಕ ಸಾಮರ್ಥ್ಯದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ದೃಢೀಕರಣವನ್ನು ಕಾಮಗಾರಿಯನ್ನು ನಿಗಧಿತ ಅವಧಿಯೊಳಗೆ ಪೂರೈಸಿಕೊಡುವ ಬಗ್ಗೆ ಕಾರ್ಯಕ್ರಮವನ್ನು ರೂಪಿಸಿ ಟೆಂಡರ್‌ನೊಂದಿಗೆ ಒದಗಿಸತಕ್ಕದ್ದು.
2. ಟೆಂಡರ್ ಅನುಮೋದನೆ ಆದ ಗುತ್ತಿಗೆದಾರರು ಟೆಂಡರ್ ಕರಾರು ಮಾಡಿಕೊಳ್ಳುವ ಮೊದಲು ಟೆಂಡರ್ ಕರಾರಿನ ಮೊತ್ತಕ್ಕೆ ಶೇಕಡ 5 ರಷ್ಟು ಹಣವನ್ನು ಪ್ರಗತಿ ಭದ್ರತಾ ಠೇವಣಿಯಾಗಿ ನೀಡಿದ ನಂತರ ಕಾರ್ಯಾದೇಶ ನೀಡಲಾಗುವುದು.
3. ಎಲ್ಲಾ ಕೆಲಸಗಳಿಗೆ ಸರ್ಕಾರಿ ಆದೇಶ ಸಂ:ಪಿಡಬ್ಲ್ಯೂಡಿ 344:ಸಿಆರ್‌ಎಂ:2000:ದಿ:15-1-2002 ರಂತೆ ಅಗತ್ಯವಾಗಿ ಸ್ವಂತವಾಗಿ ಹೊಂದಿರಬೇಕಾದ ಯಂತ್ರೋಪಕರಣಗಳು 1) ವೈಬ್ರೇಟರ್, 2) ಕಾಂಕ್ರಿಟ್ ಮಿಕ್ಸರ್, 3) ಸೆಂಟ್ರಿಂಗ್ ಸಾಮಗ್ರಿಗಳು, 4) ಟಿಪ್ಪರ್-2, 5) ಏರ್ ಕಂಪ್ರೆಸರ್, 6) ಮೆಕಾನಿಕಲ್ ಸ್ಪ್ರೇಯರ್, 7) ಡಿಆರ್‌ಆರ್ ಹಾಗೂ ಸ್ವಂತವಾಗಿ ಅಥವಾ ಬಾಡಿಗೆ ಆಧಾರ ಮೇಲೆ ಹೊಂದಿರಬೇಕಾದ ಯಂತ್ರೋಪಕರಣಗಳು 1) ಹೆಚ್‌ಎಂಪಿ ಪೇವರ್ ಫಿನಿಶರ್ ಹಾಗೂ ಇತರೆ ಅವಶ್ಯಕ ಯಂತ್ರೋಪಕರಣಗಳು, ಈ ಯಂತ್ರೋಪಕರಣಗಳು ಚಾಲ್ತಿಯಲ್ಲಿರುವ ಬಗ್ಗೆ ದಾಖಲಾತಿಗಳನ್ನು ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಿ ಅರ್ಜಿ ಸಲ್ಲಿಸುವ ಸಮಯದಲ್ಲೇ ಒದಗಿಸತಕ್ಕದ್ದು. ಒಂದು ವೇಳೆ ಈ ಯಂತ್ರೋಪಕರಣಗಳನ್ನು ಬಾಡಿಗೆ ಮೇರೆಗೆ ಪಡೆಯಲಿಚ್ಚಿಸಿದಲ್ಲಿ ಸದರಿ ಯಂತ್ರೋಪಕರಣಗಳ ಮಾಲೀಕರಿಂದ ಸಹಮತಿ ಪತ್ರವನ್ನು ಪಡೆದು ಟೆಂಡರ್ ಫಾರಂನೊಂದಿಗೆ ಲಗತ್ತಿಸತಕ್ಕದ್ದು. ಇಲ್ಲವಾದಲ್ಲಿ ಅಂತಹ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-

**ಪೌರಾಯುಕ್ತರು**

**ನಗರಸಭೆ, ತುಮಕೂರು.**